.R.P.67

Form No.4 (Civil)
Deposition Sheets
(R.P.No.57)

1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

ಎಸ್.ಸಿ. ನಂ.39/2021

ದಿನಾಂಕ: 06.09.2022 ರಂದು ಪ್ರಮಾಣ ವಚನ ಬೋಧಿಸಲಾಗಿದೆ

ಸಿ. ಡಬ್ಲ್ಯೂ :6 ಪಿ. ಡಬ್ಲ್ಯೂ :6

| | |
|---|---|
| ಸಾಕ್ಷಿದಾರರ ಹೆಸರು | ಪರಿಮಳ |
| ಗಂಡನ ಹೆಸರು | ಸ್ವಾಮಿ |
| ವಯಸ್ಸು | 40 ವರ್ಷ |
| ಉದ್ಯೋಗ | ಗೃಹಿಣಿ |
| ವಾಸ | ಮರಿಗೌಡ ಬಡಾವಣೆ |

ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:

ಚಾಸಾ.1 ತಿರುಮಲ ನನ್ನ ಮಗ. ಚಾಸಾ.2 ಸ್ವಾಮಿ ನನ್ನ ಗಂಡ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನ್ನ ಸಂಬಂಧಿಕರು. 1ನೇ ಆರೋಪಿ ಶಂಕರ್ ನನ್ನ ಸ್ವಂತ ಅಣ್ಣ. 2ನೇ ಆರೋಪಿ ಶ್ರೀನಿಧಿ ನನ್ನ ನಾದಿನಿಯ ಗಂಡ. ಸಿದ್ದಪ್ಪ ನಮ್ಮ ಯಜಮಾನರ ಅಣ್ಣ. ಈ ದಿವಸ ಅವರು ನ್ಯಾಯಾಲಯದ ಮುಂದೆ ಹಾಜರಿರುವುದಿಲ್ಲ(A3 split up). 4ನೇ ಆರೋಪಿ ಭಾಗ್ಯ ನನ್ನ ಗಂಡನ ತಂಗಿ. 5ನೇ ಆರೋಪಿ ಲಕ್ಷ್ಮಿ ನನ್ನ ಗಂಡನ ಅಕ್ಕ. 6ನೇ ಆರೋಪಿ ಪುಟ್ಟೀರಮ್ಮ ನನ್ನ ಅತ್ತೆ (ಗಂಡನ ತಾಯಿ). 7ನೇ ಆರೋಪಿ ನನ್ನ ಗಂಡನ ತಂಗಿ. ಚಿಕ್ಕವೀರಭದ್ರ ನಮ್ಮ ತವರು ಮನೆಕಡೆಯಿಂದ ಸಂಬಂದಿ ಆಗಬೇಕು. ಚಿಕ್ಕವೀರಭದ್ರ ರವರೇ ಈ ಗಲಾಟೆಗೆಲ್ಲಾ ಕಾರಣರಾಗಿರುತ್ತಾರೆ. ಈ ದಿವಸ ಅವರು ನ್ಯಾಯಾಲಯದ ಮುಂದೆ ಹಾಜರಿರುವುದಿಲ್ಲ (A8 split up). ಈಗ ನನಗೆ ತೋರಿಸಿದ 10 ಫೋಟೋಗಳಲ್ಲಿ ನನ್ನ ಯಜಮಾನರು ಇದ್ದಾರೆ. ಸದರಿ ಫೋಟೋಗಳಿಗೆ ಸಂಬಂಧಪಟ್ಟಿರುವ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ದೃಢೀಕರಣ ಪತ್ರ ಕಡತದಲ್ಲಿ ಲಭ್ಯ ಇರುವುದಿಲ್ಲ, ಆದ್ದರಿಂದ ಆರೋಪಿತರ ವಕೀಲರು , ಫೋಟೋಗಳನ್ನು ನಿಶಾನೆಯಾಗಿ ಗುರುಪಡಿಸಲು ಆಕ್ಷೇಪಣೆ ಮಾಡಿರುತ್ತಾರೆ. ಆದ್ದರಿಂದ ಫೋಟೋಗಳನ್ನು ನಿಶಾನೆಗೆ ಗುರಿಪಡಿಸಿರುವುದಿಲ್ಲ. ನನಗೆ ಮೇಲೆ

ತೋರಿಸಿದ ಫೋಟೋದಲ್ಲಿ, ನನ್ನ ಗಂಡನಿಗೆ ರಕ್ತ ಗಾಯಗಳು ಕಾಣಿಸುತ್ತಿವೆ. ಈ ವರ್ಷ ಸೆಪ್ಟೆಂಬರ್ 30 ಕ್ಕೆ ಘಟನೆ ನಡೆದು 2 ವರ್ಷಗಳು ಆಗುತ್ತವೆ. ನಾನು ಮತ್ತು ನನ್ನ ಮಗಳು ದೊಡ್ಡಪ್ಪನ ನೋಡಲು ಮಂಡ್ಯದ ಹೊಸಹಳ್ಳಿಗೆ ಹೋಗಿದ್ದೆವು. ಮನೆಯಲ್ಲಿ ನನ್ನ ಗಂಡ ಚಾಸಾ.2 ಮತ್ತು ನನ್ನ ಮಗ ಚಾಸಾ.1 ಇದ್ದರು. ನಾವು ಮರಿಗೌಡ ಬಡಾವಣೆಯಲ್ಲಿ 2 ನೇ ಕ್ರಾಸ್ ನಲ್ಲಿ ವಾಸ ಇದ್ದೇವೆ. ಆರೋಪಿತರು ಸಹಾ ಮರಿಗೌಡ ಬಡಾವಣೆಯ 2 ನೇ ಕ್ರಾಸ್ ನ ನಮ್ಮ ಮನೆಯ ಪಕ್ಕದಲ್ಲಿ ಇದ್ದರು. ನಮ್ಮ ಮತ್ತು ಆರೋಪಿತರ ಮನೆಯ ಒಂದೇ ಗೋಡೆ ಇದೆ.

ಆ ದಿವಸ ನಾನು ಬೆಳಗ್ಗೆ ನಾನು 8.30 ಗೆ ನನ್ನ ಗಂಡ (ಚಾಸಾ.2 ) ರವರಿಗೆ ಫೋನ್ ಮಾಡಿ ಬಂದು ನನ್ನನ್ನು ಕರೆದುಕೊಂಡು ಹೋಗಿ ಅಂತ ಹೇಳಿದ್ದೆನು. ಬೆಳಗ್ಗೆ 9.30 ಸಮಯದಲ್ಲಿ ಶರತ್ ಎಂಬುವರು ಫೋನ್ ಮಾಡಿ, ಶಂಕರ, ಶ್ರೀನಿಧಿ , ಲಕ್ಷ್ಮಿ, ಗೀತ, ಬಾಗ್ಯ, ಸಿದ್ದಪ್ಪ ಇವರೆಲ್ಲರೂ, ನಿಮ್ಮ ಗಂಡನಿಗೆ ಹೊಡೆದಿದ್ದಾರೆ ಎಂದು ತಿಳಿಸಿದರು. ನಾನು ಕೂಡಲೇ ಆಟೋ ಮಾಡಿಕೊಂಡು ಮರಿಗೌಡ ಬಡಾವಣೆಗೆ ಬಂದೆನು. ಮನೆ ಮುಂದೆ ತುಂಬಾ ರಕ್ತ ಚೆಲ್ಲಿತ್ತು ಹಾಗೂ ಕಲ್ಲುಗಳು ಬಿದ್ದಿತ್ತು. ನಾನು ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಹೋದೆನು. ನಾನು ನನ್ನ ಮಗ ತಿರುಮಲ ಗೆ ಏನು ಗಲಾಟೆ ಆಯಿತು ಅಂತ ಕೇಳಿದೆನು. ಆಗ ಚಾಸಾ.1 , ಆರೋಪಿತರು ಎಲ್ಲಾ ಸೇರಿ ಹಲ್ಲೆ ಮಾಡಿದರು ಅಂತ ಹೇಳಿದನು. ಚಾಸಾ.1 ತಿರುಮಲ ನಿಗೆ ಕೈ ಬೆರಳುಗಳು ಊತಗೊಂಡಿತ್ತು, ಮಡಿಸಲು ಆಗುತ್ತಿರಲಿಲ್ಲ, ಕಿವಿಯಲ್ಲಿ ರಕ್ತ ಬರುತ್ತಿತ್ತು. ನನ್ನ ಗಂಡ ಚಾಸಾ.2 ರವರಿಗೆ ಹಣೆಗೆ, ಗಲ್ಲಕ್ಕೆ, ಕತ್ತಿಗೆ, ಕೆನ್ನೆಗೆ ಏಟಾಗಿತ್ತು. ವೈದ್ಯರು ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿಗೆ ಕರೆದುಕೊಂಡು ಹೋಗಿ ಅಂತ ತಿಳಿಸಿದರು. ಚಾಸಾ.1 ಮತ್ತು 2 ರವರನ್ನು super specialty Asthra ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನಿಮಾನ್ಸ್ ಗೆ ಕರೆದುಕೊಂಡು ಹೊಗಿದ್ದೆವು, ನಿಮಾನ್ಸ್ ನಲ್ಲಿ ಕೋವಿಡ್ ಇದ್ದುದರಿಂದ ಆಗುವುದಿಲ್ಲ ಎಂದು ಹೇಳಿದರು. ಆಸ್ಪತ್ರೆಯಲ್ಲಿ 25 ದಿವಸ ಇದ್ದೆವು. ಚಾಸಾ.1 , 1 ನೇ ಆರೋಪಿ ಶಂಕರ ದಿಂಡುಗಲ್ಲನ್ನು ಚಾಸಾ.2 ರವರ ತಲೆಯ ಮೇಲೆ ಎತ್ತಿ ಹಾಕಿದನು ಅಂತ ಹೇಳಿದನು. ಆರೋಪಿತರು ದೊಣ್ಣೆಯಿಂದ ಚಾಸಾ.1 ರವರ ಕೈಗೆ ಹೊಡೆದರು ಹಾಗೂ ಕುಡುಗೋಲಿನಿಂದ ಕಿವಿಗೆ ಹೊಡೆದರು ಅಂತ ಚಾಸಾ.1 ನನಗೆ ಹೇಳಿದರು.

ಸಿವಿಲ್ ಕೋರ್ಟಿನಲ್ಲಿ ಆಸ್ತಿ ಭಾಗಾಂಶಕ್ಕೆ ನನ್ನ ಗಂಡ ಮತ್ತು ಆರೋಪಿತರ ನಡುವೆ ಕೇಸು ನಡೆಯುತ್ತಿದ್ದ ವಿಚಾರಕ್ಕೆ ಗಲಾಟೆ ಆಯಿತು. ಘಟನೆ ನಡೆದ ಸದರಿ ದಿವಸ, ನನ್ನ ಗಂಡ(ಚಾಸಾ.2) ಮನೆ ರಿಪೇರಿ ಮಾಡಿಸುತ್ತಿದ್ದಾಗ , ಆರೋಪಿತರು, ಸಿವಿಲ್ ಕೋರ್ಟ್ ನಲ್ಲಿ ಕೇಸು ನಡೆಯುತ್ತಿದೆಯಲಾ ಯಾಕೆ ರಿಪೇರಿ ಮಾಡಿಸುತ್ತಿದ್ದೀಯಾ ಅಂತ ಕೇಳಿದರು ಹಾಗೂ ಕೇಸನ್ನು ವಾಪಾಸ್ಸು ತೆಗೆದುಕೋ ಹಾಗೂ ನಾವು ಹೇಳಿದಂತೆ ನೀನು ಹೇಳು ಅಂತ ಕೇಳಿದರು. ಚಿಕ್ಕವೀರಭದ್ರ (A 8) ಹೇಳಿದಂತೆ ನಾವೆಲ್ಲರೂ

ಆ ಕಡೆ ಈ ಕಡೆ ಓಡಿ ಹೋಗೋಣ ಅಂತ 1ನೇ ಆರೋಪಿ ಶಂಕರ ಎಲ್ಲಾ ಆರೋಪಿತರನ್ನು ಕರೆದುಕೊಂಡು ಹೊರಟು ಹೋದನು ಅಂತ ಚಾಸಾ.1 ನನಗ ಹೇಳಿದನು. ನನ್ನ ಗಂಡ ಚಾಸಾ.2 ಪೂರ್ತಿ ಗುಣಮುಖ ಆಗಿರುವುದಿಲ್ಲ , ಅವರಿಗೆ ಮತ್ತೊಂದು ಶಸ್ತ್ರ ಚಿಕಿತ್ಸೆಯನ್ನು ಮಾಡಿಸಬೇಕಿದೆ . ಅವರಿಗೆ ಮುಖದಲ್ಲಿ ಚೈನುಗಳನ್ನು ಹಾಕಿದ್ದಾರೆ, ಅವುಗಳನ್ನು ತೆಗೆಸಬೇಕಿದೆ. ಸದರಿ ಘಟನೆಯಿಂದ ಚಿಕಿತ್ಸೆಗಾಗಿ ಒಟ್ಟು ನಮಗೆ 15 ಲಕ್ಷ ಹಣ ಖರ್ಚು ಆಗಿದೆ.

<u>ಪಾಟೀ ಸವಾಲುಃ </u> ಆರೋಪಿಗಳ ಪರ ಶ್ರೀ ಬಿ.ಆರ್.ವಿ.ವಕೀಲರು, ಪಾಟೀ ಸವಾಲನ್ನು ಮದ್ಯಾಹ್ನ 2.45 ಗಂಟೆಗೆ ಮಾಡುವುದಾಗಿ ಸೂಚಿಸಿದ್ದರ ಮೇರೆಗೆ, ಮದ್ಯಾಹ್ನದ ಅವಧಿಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

<u>ದಿನಾಂಕಃ 21.02.2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋದಿಸಲಾಗಿದೆ</u>

<u>ಮುಂದುವರಿದ ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಸಿ.ಪಿ. ವಕೀಲರಿಂದಃ</u>

ಮಿಕ್ಕೆರೆ ಗ್ರಾಮದಲ್ಲಿ ನನ್ನ ತಂದೆ ತಾಯಿ ವಾಸವಿದ್ದಾರೆ. ಮಿಕ್ಕೆರೆ ಗ್ರಾಮದಲ್ಲಿ ನನ್ನ ತವರು ಮನೆ ಇದೆ. ಮಿಕ್ಕೆರೆ ಗ್ರಾಮದಲ್ಲಿ ತವರು ಮನೆಯ ಆಸ್ತಿಯನ್ನು ನನಗೆ ಕೊಟ್ಟಿದ್ದಾರೆ. 1 ಎಕರೆ 6 ಗುಂಟೆ ಜಮೀನನ್ನು ನನಗೆ ಕೊಟ್ಟಿದ್ದಾರೆ. ನನ್ನ ಗಂಡ ಚಾಸಾ.2 ಸ್ವಾಮಿ, ಅವರಿಗೆ ಬಂದಿದ್ದ ಆಸ್ತಿಯನ್ನು ಮಾರಾಟ ಮಾಡಿಬಿಟ್ಟಿದ್ದರು ಎಂದರೆ ಸಾಕ್ಷಿಯು ಅವರಿಗೆ ಬರೆದುಕೊಟ್ಟಿದ್ದ ಆಸ್ತಿಯನ್ನು ಮಾರಿದ್ದಾರೆ ಎಂದು ಹೇಳುತ್ತಾರೆ. ನನ್ನ ಗಂಡ ಮಾರಾಟ ಮಾಡಿದ ಆಸ್ತಿಗೆ ಮತ್ತು ಉಳಿದ ಆಸ್ತಿಗಳಿಗೆ ಕೋರ್ಟಿನಲಿ ವ್ಯಾಜ್ಯ ನಡೆಯುತ್ತಿದೆ ಎಂದರೆ ಸರಿ. ಕೆಳ ಹಂತದ ನ್ಯಾಯಾಲಯದಲ್ಲಿ ಕೇಸು 4ನೇ ಆರೋಪಿ ಭಾಗ್ಯ,

5 ನೇ ಆರೋಪಿ ಲಕ್ಷ್ಮಿ ಮತ್ತು 7 ನೇ ಆರೋಪಿ ಗೀತ ಪರವಾಗಿ ಆಗಿತ್ತು ಎಂದರೆ ಗೊತ್ತಿಲ್ಲ. ನನ್ನ ಗಂಡ ಆಸ್ತಿಯನ್ನು ಮಾರಿದ ಮೇಲೆ , ಮಿಕ್ಕೆರೆ ಗ್ರಾಮಕ್ಕೆ ಹೋಗಿ ಅಲ್ಲಿ ನನಗೆ ಬಂದಂತ ಆಸ್ತಿಯಲ್ಲಿ ವ್ಯವಸಾಯ ಮಾಡಿಕೊಂಡಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ನುಡಿಯುತ್ತಾರೆ ನನ್ನ ಗಂಡ ಹೋಗಿ ಬಂದು ಮಾಡುತ್ತಿದ್ದರು ಎಂದು. ಮರಿಗೌಡ ಬಡಾವಣೆಯಲ್ಲಿ ನಾವು ಇದ್ದ ಮನೆಗೆ ಎರಡು portion ಗಳು ಇವೆ. ಒಂದು portion ನಲ್ಲಿ ನನ್ನ ಅತ್ತೆಯಾದ 6 ನೇ ಆರೋಪಿ ವಾಸ ಇದ್ದರು ಎಂದರೆ ಸಾಕ್ಷಿಯು ಇವರೊಂದಿಗೆ ನಾದಿನಿಯರು ಮತ್ತು ಅವರ ಗಂಡಂದಿರು ಇದ್ದರು ಎಂದು ಹೇಳುತ್ತಾರೆ. 1 ನೇ ಆರೋಪಿ ಶಂಕರ್ ನನ್ನ ಸ್ವಂತ ಅಣ್ಣ ಎಂದರೆ ಸರಿ. ನನ್ನ ತಂದೆಯ ಕುಟುಂಬದ ಆಸ್ತಿ 1 ನೇ ಆರೋಪಿ ಶಂಕರ್ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ಹೇಳುತ್ತಾರೆ ನನ್ನ ತಂದೆಯ ಹೆಸರಿನಲ್ಲಿ ಇದೆ ಎಂದು. ನನ್ನ ತಂದೆ ನನಗೆ ಕೊಟ್ಟಿದ್ದ ದಾನ ಪತ್ರವನ್ನು ವಜಾ ಮಾಡಬೇಕು ಎಂದು ನನ್ನ ತಂದೆ ನನ್ನ ಮೇಲೆ ಕೇಸನ್ನು ಹಾಕಿದ್ದಾರೆ ಎಂದರೆ ಸಾಕ್ಷಿಯು, 2009 ನೇ ಇಸವಿಯಲ್ಲಿ ನನ್ನ ತಂದೆ ನನಗೆ ದಾನ ಪತ್ರವನ್ನು ಬರೆದುಕೊಟ್ಟಿದ್ದರು, ಆದರೆ ಈಗ ಸದರಿ ಪ್ರಕರಣದ ಕೇಸು ದಾಖಲಿಸಿದ ಮೇಲೆ, ಒಂದು ವರ್ಷದ ಹಿಂದೆ ದಾನ ಪತ್ರವನ್ನು ವಜಾ ಮಾಡಬೇಕು ಎಂದು ನನ್ನ ತಂದೆ ನನ ಮೇಲೆ ಕೇಸನ್ನು ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ನನಗೆ ತವರು ಮನೆಯಿಂದ ಆಸ್ತಿಯನ್ನು ಕೊಟ್ಟಿದ್ದರು ಸಹಾ , ಉಳಿದ ಆಸ್ತಿಯಲ್ಲೂ ಸಹಾ ಪಾಲು ಬೇಕು ಅಂತ ನಾನು ಮತ್ತು ನನ್ನ ಗಂಡ ಕೇಳಿದ್ದರಿಂದ ನನ್ನ ತಂದೆ 2018-19 ರಲ್ಲಿ ನನ್ನ ತಂದೆ ನನಗೆ ಕೊಟ್ಟಿದ್ದ ದಾನ ಪತ್ರವನ್ನು ವಜಾ ಮಾಡಬೇಕು ಅಂತ ಕೇಸನ್ನು ಹಾಕಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಂದೆ ಸದರಿ ಕೇಸನ್ನು ಹಾಕಿದ ನಂತರ, ಆಸ್ತಿಯನ್ನು ಉಳಿಸಿಕೊಳ್ಳುವುದಕ್ಕೋಸ್ಕರ ನಾನು ಮತ್ತು ನನ್ನ ಗಂಡ ಮಿಕ್ಕೆರೆ ಗ್ರಾಮದಲ್ಲಿ ವಾಸ ಇದ್ದೆವು ಎಂದರೆ ಸರಿಯಲ್ಲ. ನನ್ನ ಗಂಡ ಚಾಸಾ.2 ರವರ ಮೇಲೆ ಹಲ್ಲೆ ನಡೆದ ಸಮಯದಲ್ಲಿ ನಾನು ಮತ್ತು ನನ್ನ ಗಂಡ ಮಿಕ್ಕೆರೆ ಗ್ರಾಮದಲ್ಲಿ ವಾಸ ಇದ್ದೆವು ಎಂದರೆ ಸರಿಯಲ್ಲ.

ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ಪಡೆದುಕೊಂಡರು. ನನ್ನ ಹೇಳಿಕೆಯಲ್ಲಿ ನಾನು, "ನನ್ನ ದೊಡ್ಡಪ್ಪನಿಗೆ ಹುಷಾರಿಲ್ಲದ ಕಾರಣ ಮಂಡ್ಯದ ಹೊಸಹಳ್ಳಿಗೆ ಹೋಗಿದ್ದೆನು ಅಂತ ಹೇಳಿದ್ದೇನೆ" ಎಂದರೆ ಸರಿ . ನನ್ನ ಹೇಳಿಕೆಯಲ್ಲಿ ನಾನು, ದೊಡ್ಡಪ್ಪ ಅಂತ ಹೇಳಿಲ್ಲ ಎಂದರೆ ಸರಿ. ನನ್ನ ಸಾಕ್ಷಿಯಲ್ಲಿ ದೊಡ್ಡಪ್ಪನಿಗೆ ಹುಷಾರಿಲ್ಲ ಅಂತ ನಾನು ಹೇಳಿರುವುದು ಸುಳ್ಳು ಎಂದರೆ ಸಾಕ್ಷಿಯು ದೊಡ್ಡಮ್ಮನಿಗೆ ಹುಷಾರಿಲ್ಲ ಅಂತ ನಾನು , ನನ್ನ ಮುಖ್ಯ ವಿಚಾರಣೆ ಸಾಕ್ಷಿಯಲ್ಲಿ ಹೇಳಿದ್ದೇನೆ . ಮಂಡ್ಯದ ಹೊಸಹಳ್ಳಿಯಿಂದ ಮರಿಗೌಡ ಬಡಾವಣೆಗೆ ಎರಡುರವರೆ ಯಿಂದ ಮೂರು ಕಿ.ಮಿ ದೂರ ಆಗಬಹುದು . ಘಟನೆ ಬಗ್ಗೆ ತಿಳಿದುಕೊಂಡು ನಾನು ಮನೆ ಹತ್ತಿರ ಬಂದಾಗ 9.45 – 10.00 ಗಂಟೆ ಆಗಿತ್ತು. ಶರತ್ ಫೋನ್ ಮಾಡಿದಾಗ, ಎಲ್ಲಿಗೆ ಕರೆದುಕೊಂಡು ಹೋಗುತ್ತಿದ್ದೇನೆ ಅಂತ ಹೇಳಲಿಲ್ಲ,

ಹೀಗೆ ಆಗಿದೆ ಅಂತ ಹೇಳಿದರು. ಮನೆ ಹತ್ತಿರ 5 ನಿಮಿಷ ಇದ್ದೆ. ಆಸ್ಪತ್ರೆಗೆ ಹೋದಾಗ 10.00-10.15 ಗಂಟೆ ಆಗಿತ್ತು. ಪೊಲೀಸರು ಆಸ್ಪತ್ರೆಯಲ್ಲಿ ಇರಲಿಲ್ಲ. ನಾನು ಪೊಲೀಸ್ ಠಾಣೆಗೆ ಹೋಗಲಿಲ್ಲ, ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಸರ್ಕಾರಿ ಆಸ್ಪತ್ರೆಗೆ ಹೋದ ಮೇಲೆ, ನಂತರ ಪೊಲೀಸ್ ಠಾಣೆಗೆ ಹೋಗಲಿಲ್ಲ. ಸರ್ಕಾರಿ ಆಸ್ಪತ್ರೆಯಲ್ಲಿ 10 ನಿಮಿಷ ಇದ್ದೆವು, ಅಲ್ಲಿ ಆಗುವುದಿಲ್ಲ ಎಂದರು, ಬೆಂಗಳೂರು ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನನ್ನ ಮಗನಿಗೆ ಚಿಕಿತ್ಸೆ ನಡೆಯುತ್ತಿತ್ತು, ನನ್ನ ಮಗ ನನ್ನೊಂದಿಗೆ ಚೆನ್ನಾಗಿ ಮಾತನಾಡಿದನು. ಘಟನೆ ನಡೆದ ದಿನ ನಾನು ಮಿಕ್ಕೆರೆ ಗ್ರಾಮದಲ್ಲಿ ಇದ್ದೆ ಎಂದರೆ ಸರಿಯಲ್ಲ. ನನ್ನ ಮಗ ಅಥವಾ ಬೇರೆ ಯಾರು ನನಗೆ ಘಟನೆ ಬಗ್ಗೆ ಹೇಳಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಮತ್ತು ಆರೋಪಿಗಳ ನಡುವೆ ನ್ಯಾಯಾಲಯದಲ್ಲಿ ಸಿವಿಲ್ ವ್ಯಾಜ್ಯಗಳು ಬಾಕಿ ಇರುವುದರಿಂದ, ಅವುಗಳನ್ನು ಬರೆಹರಿಸಿಕೊಂಡು ಆಸ್ತಿಯನ್ನು ಲಪಟಾಯಿಸಿಕೊಳ್ಳಬೇಕು ಎಂಬ ಕಾರಣದಿಂದ ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಗಳು, ಕಳೆದ 20 ವರ್ಷಗಳಿಂದ , ನನ್ನ ಗಂಡನ ಮೇಲೆ ಕೇಸು ನಡೆಸುತ್ತಿದ್ದಾರೆ. ಈ ಪ್ರಕರಣ ಅಲ್ಲದೆ ಕಳೆದ 20 ವರ್ಷಗಳಲ್ಲಿ ನಮ್ಮ ಮತ್ತು ಆರೋಪಿಗಳ ನಡುವೆ ಬೇರೆ ಯಾವುದೇ ಕ್ರಿಮಿನಲ್ ಪ್ರಕರಣಗಳು ಆಗಿರುವುದಿಲ್ಲ.

<u>ಮರು ವಿಚಾರಣೆ</u> ಃ ಏನು ಇಲ್ಲ.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.